**ಓ.ಎಸ್. ನಂಬರಃ 44/2023**

**ಪಿ. ಡಬ್ಲ್ಯೂಃ 1**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 02-04-2025)**

**ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ ಜೆ ಡಿ ಬಿ ವಕೀಲರಿಂದ,**

ದಾವಾ ಆಸ್ತಿಗಳ ಸರ್ವೇ ನಂಬರಗಳನ್ನು ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ದಾವಾ ಆಸ್ತಿಗಳ ಸರ್ವೇ ನಂಬರಗಳಲ್ಲಿರುವ ಕ್ಷೇತ್ರಗಳು ಎಷ್ಟು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳು ಮೂಲತಃ ನನ್ನ ಅಜ್ಜ ಬಾಬಯ್ಯ ರವರಿಗೆ ಸೇರಿದ್ದಾಗಿರುತ್ತದೆ. ನನ್ನ ಅಜ್ಜ ಬಾಬಯ್ಯನವರಿಗೆ ದಾವಾ ಆಸ್ತಿಗಳು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ದಾವಾ ಆಸ್ತಿಯು ನನ್ನ ಅಜ್ಜನಿಂದ ಬಂದಿರುತ್ತದೆ. ನನ್ನ ತಂದೆಯ ಮರಣಾಂತರ ದಾವಾ ಆಸ್ತಿಯು ಅವರ ಮಕ್ಕಳಾದ

ನಾನು ಮತ್ತು ಪ್ರತಿವಾದಿ 1 ರಿಂದ 3 ರವರಿಗೆ ಹಾಗೂ ನನ್ನ ತಾಯಿ ರಮಾರವರಿಗೆ ಬಂದಿರುತ್ತದೆ. ಹಾಗೆ ದಾವಾ ಆಸ್ತಿಯಲ್ಲಿ ನನಗೆ, 1 ರಿಂದ 3 ನೇ ಪ್ರತಿವಾದಿ ಮತ್ತು ನನ್ನ ತಾಯಿಯವರಿಗೆ ಸಮಾನ ಹಕ್ಕು ಇತ್ತು. 2 ನೇ ಪ್ರತಿವಾದಿ ಮತ್ತು ನನ್ನ ತಾಯಿಗೆ ಇರುವ ದಾವಾ ಆಸ್ತಿಯ ಹಕ್ಕನ್ನು 3 ನೇ ಪ್ರತಿವಾದಿಯವರಿಗೆ ದಸ್ತಾವೇಜು ಮಾಡಿ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಮೋಸ ಮಾಡಿ ಬರೆಸಿಕೊಂಡಿರುತ್ತಾಳೆ. ನನ್ನ ತಾಯಿ ಬರೆದುಕೊಟ್ಟಿರುವುದಿಲ್ಲ. ದಿನಾಂಕ 13.02.2017 ರಂದು 2 ನೇ ಪ್ರತಿವಾದಿ ಮತ್ತು ನನ್ನ ತಾಯಿ ಹಕ್ಕು ಬಿಡುಗಡೆ ಪತ್ರವನ್ನು 3 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಮುಂದುವರೆದು 3 ನೇ ಪ್ರತಿವಾದಿ ಕಿರಿಕಿರಿ ಶುರು ಮಾಡಿದ ನಂತರ ನಾವು ದಾಖಲೆ ತೆಗೆದು ನೋಡಿದಾಗ 2 ನೇ ಪ್ರತಿವಾದಿ ಮತ್ತು ನನ್ನ ತಾಯಿ ದಾವಾ ಆಸ್ತಿಯ ಹಕ್ಕನ್ನು 3 ನೇ ಪ್ರತಿವಾದಿ ಮಾಡಿಕೊಂಡ ಬಗ್ಗೆ ತಿಳಿದುಬಂದಿರುತ್ತದೆ ಎಂದು ಹೇಳಿರುತ್ತಾರೆ. ಹಕ್ಕು ಬಿಡುಗಡೆ ಪತ್ರವನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ದಾಖಲೆ ತೆಗೆಸಿ ನೋಡಿದಾಗ ಆ ಬಗ್ಗೆ ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಆ ರೀತಿ ನಾನು ಎರಡು ವರ್ಷಗಳ ಹಿಂದೆ ದಾಖಲೆ ತೆಗೆಸಿ ನೋಡಿರುತ್ತೇನೆ. ತದನಂತರ ಹಕ್ಕು ಬಿಡುಗಡೆ ಪತ್ರದ ಬಗ್ಗೆ ನನ್ನ ಅಕ್ಕ 2 ನೇ ಪ್ರತಿವಾದಿಯವರನ್ನು ಕೇಳಿದಾಗ ಆ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ಹೇಳಿರುತ್ತಾರೆ. ನಂತರ ನಾನು 2 ನೇ ಪ್ರತಿವಾದಿಗೆ ಮೋಸ ಮಾಡಿ ದಾಖಲೆ ಬರೆಸಿಕೊಂಡ ಬಗ್ಗೆ ದೂರು ದಾಖಲು ಮಾಡಲು ನಾನು ಹೇಳಿರುವುದಿಲ್ಲ. ಅದೇ ರೀತಿ ಈ ದಾವೆಯನ್ನು ದಾಖಲಿಸುವಾಗ 2 ನೇ ಪ್ರತಿವಾದಿಯವರಿಗೆ ನನ್ನ ಜೊತೆ ದಾವೆಯಲ್ಲಿ ವಾದಿಯಾಗಿ ಸೇರಲು ಕೇಳಿರುವುದಿಲ್ಲ.

2. ನಾವು ಪ್ರತಿವರ್ಷ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ತೆಗೆದು ನೋಡುವುದಿಲ್ಲ. ಕೊನೆಯ ಬಾರಿ ಎರಡು ವರ್ಷಗಳ ಹಿಂದೆ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ಎಂದೂ ನೋಡಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**